ದಲಿತರು ಹಾಗೂ ಸವರ್ಣೀಯರ ಮಧ್ಯ ಘರ್ಷಣೆ ಉಂಟಾಗಿರುವ ಬಗ್ಗೆ.

1341 – ಶ್ರೀ ಸುಭಾಸ್ ಜೋಷಿ (ನಿಪ್ಪಾಣಿ). ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕೋಡಿ ತಾಲ್ಲೂಕಿನ ಬೆಡಿಕೆ ಹಾಳ್ ಗ್ರಾಮದಲ್ಲಿ ದಲಿತರು ಹಾಗೂ ಸವರ್ಣೀಯರ ಮಧ್ಯ ಘರ್ಷಣೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ ಎಷ್ಟು ಜನರು ಮೃತಪಟ್ಟಿದ್ದಾರೆ;

ಇ) ಎಷ್ಟು ಜನರನ್ನು ಬಂಧಿಸಲಾಗಿದೆ;

ಈ) ದಲಿತರಿಗೆ ಏನಾದರೂ ರಕ್ಷಣೆಯನ್ನು ನೀಡಲಾಗಿದೆಯೇ?

ಶ್ರೀ ಧರ್ಮಸಿಂಗ್, (ಗೃಹ ಸಚಿವರು):

ಅ) ಹೌದು.

ಆ) ಯಾರೂ ಮೃತರಾಗಿರುವುದಿಲ್ಲ. ಆದರೆ ಪೋಲೀಸ್ ಪೇದೆಯ ಬಂದೂಕಿನಿಂದ ಆಕಸ್ಮಿಕವಾಗಿ ಹೊರಬಂದ ಗುಂಡಿನಿಂದಾಗಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ.

ಇ) 36

ಈ) ಹೌದು.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು. ಈಗ ವರದಿಯನ್ನೊಪ್ಪಿಸುವುದು.

ವರದಿಯನ್ನೊಪ್ಪಿಸುವುದು.

ಶ್ರೀಮತಿ ಸಿ.ನಾಗಮ್ಮ ಕೇಶವಮೂರ್ತಿ (ಉಪಾಧ್ಯಕ್ಷರು): ಮಾನ್ಯ ಅಧ್ಯಕ್ಷರೇ, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎಂಟನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಎಂ.ಪಿ. ವೆಂಕಟೇಶ್: ಈ ವರದಿಯನ್ನು ಸಭೆಯು ಒಪ್ಪುವುದೆಂದು ಸೂಚಿಸುತ್ತೇನೆ. ಅಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ರಾಜ್ಯದಲ್ಲಿ ದರೋಡೆಗಳಾಗುತ್ತಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಸನ್ಮಾನ್ಯ ಅಧ್ಯಕ್ಷರೇ, ನಿನ್ನೆದಿನ ಈ ಸದನದಲ್ಲಿ ಪ್ರಶ್ನೋತ್ತರ ಅವಧಿಯ ನಂತರ, ರಾಜ್ಯದಲ್ಲಿ ಆಗುತ್ತಿರತಕ್ಕ ದರೋಡೆಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಒದಗಿಸಿಕೊಟ್ಟಿದ್ದಿರಿ. ಮಾನ್ಯ ಗೃಹಸಚಿವರು ಒಂದು ಹೇಳಿಕೆ ಕೊಡುತ್ತಾರೆಂದು, ಅವರ ಪರವಾಗಿ ಮಾನ್ಯ ಮೊಯ್ಲಿಯವರು ಹೇಳಿದರು. ಈ ಹೇಳಿಕೆ ಆಗುತ್ತಿರುವಾಗಲೇ ಮತ್ತೊಂದು ದರೋಡೆ ಹಾಸನ ಜಿಲ್ಲೆಯ ಅರಸೀಕೆರೆ ಹತ್ತಿರ ಬಸ್ ನಿಲ್ಲಿಸಿ, ಅಲ್ಲಿರತಕ್ಕ ಪ್ಯಾಸೆಂಜರುಗಳನ್ನು ದರೋಡೆ ಮಾಡಿ, ಸಾವಿರಾರು ರೂಪಾಯಿ ಅಪಹರಿಸಿರುವುದು ಮತ್ತು ಹೆಣ್ಣುಮಕ್ಕಳ ಚಿನ್ನವನ್ನು ದರೋಡೆ ಮಾಡಿರುವುದೂ ಇಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ತಮ್ಮ ಗಮನಕ್ಕೂ ಬಂದಿದೆ.

ಅಧ್ಯಕ್ಷರು: ಇದನ್ನು ಸೋಮವಾರ ಗಮನಸೆಳೆಯುವ ಸೂಚನೆಯಾಗಿ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಗೃಹ ಸಚಿವರು ಇಲ್ಲಿಯೇ ಇದ್ದಾರೆ, ಅವರು ಒಂದು ಹೇಳಿಕೆ ಕೊಡುವುದಕ್ಕೆ ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ದರೋಡೆಕೋರರು ಬಂಧೂಕು ಹಿಡಿದು ಬಸ್ಸನ್ನು ನಿಲ್ಲಿಸಿ, ಬಸ್ಸಿನ ಒಳಗಡೆ ಬಂಧೂಕು ಹಿಡಿದುಕೊಂಡು ಹೋಗಿದ್ದಾರೆ. ಸಂಚಾರಿ ಪೋಲೀಸ್ ವಾಹನಗಳನ್ನೇನಾದರೂ ರಸ್ತೆ ರಸ್ತೆಗಳಲ್ಲಿ ಏರ್ಪಾಡು ಮಾಡುತ್ತೀರಾ. ಇದರ ಬಗ್ಗೆ ಜಾಗೃತಿ ಇರಬೇಕು. ಇಡೀ ರಾಜ್ಯದಲ್ಲಿ ಗಂಭೀರ ಪರಿಸ್ಥಿತಿ ಇದೆ.....

ಅಧ್ಯಕ್ಷರು :ಅದಕ್ಕೆ ಏನು ಮಾಡಬೇಕು ಹೇಳಿ. ಸೋಮವಾರ ಗಮನ ಸೆಳೆಯುವ ಸೂಚನೆಯಾಗಿ ಇದನ್ನು ತೆಗೆದುಕೊಳ್ಳೋಣವೆಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಧರ್ಮಸಿಂಗ್ : ನಿನ್ನೆ ಬೀದರ್‌ನಲ್ಲಿ ಆಗಿದೆ, ಅದಕ್ಕಾಗಿ ಅಲ್ಲಿಗೆ ಒಂದು ಸ್ಕಾಡ್ ಮಾಡಿ, ಒಂದು ಜೀಪು, ಎರಡು ಇನ್ ಸ್ಪೆಕ್ಟರ್ ಗಳನ್ನು ಕಳುಹಿಸಿದ್ದೇವೆ. ಇಲ್ಲಿಯೂ ಕೂಡ ಮಾಡುತ್ತೇವೆ. ಸೋಮವಾರದ ದಿವಸ ಇದಕ್ಕೆ ಉತ್ತರ ಕೊಡುತ್ತೇನೆ.

2) ಯುಗಾದಿ ಹಬ್ಬಕ್ಕಾಗಿ ಹೆಚ್ಚುವರಿ ಗೋಧಿ ಕೊಡುವುದರ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಇಂದು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ನಿನ್ನೆಯ ದಿವಸ ಮಾನ್ಯ ಆಹಾರ ಮಂತ್ರಿಗಳು ಒಂದು ಹೇಳಿಕೆ ನೀಡಿ, ಒಂದು ಆಶ್ವಾಸನೆ ಕೊಟ್ಟರು. ಯುಗಾದಿ ಹಬ್ಬಕ್ಕೋಸ್ಕರ 3 ಕೆ.ಜಿ ಗೋಧಿಯನ್ನು ಹೆಚ್ಚು ಕೊಡುತ್ತೇವೆ ಎಂಬ ಭರವಸೆಯನ್ನು ಕೊಟ್ಟರು. ಅದೂ ಮುಗ್ಗಲು ಗೋಧಿ ಎಂದು ಹೇಳುವುದರ ಜೊತೆಗೆ, ಯುಗಾದಿ ಹಬ್ಬಕ್ಕೆ ಇರಲಿ, ಈ ವರ್ಷದ ಮಾರ್ಚ್ ತಿಂಗಳ ಆಹಾರ ಸಾಮಾಗ್ರಿಗಳು ಇನ್ನೂ ಬಿಡುಗಡೆಯಾಗಿರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಕೊಡಬೇಕು. ಯುಗಾದಿ ಹಬ್ಬಕ್ಕೋಸ್ಕರ ಪ್ರತಿ ವರ್ಷ 3 ಕೆ.ಜಿ. ಹೆಚ್ಚುವರಿಯಾಗಿ ಸಕ್ಕರೆ, ಗೋಧಿ, ಪಾಮೋಲಿನ್ ಎಣ್ಣೆ ಕೊಟ್ಟುಕೊಂಡು ಬಂದಿರುವುದು ಸಂಪ್ರದಾಯ. ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಮಾರ್ಚ್ ತಿಂಗಳಲ್ಲಿ ಕಾರ್ಡುದಾರರಿಗೆ ಕೊಡಬೇಕಾಗಿರತಕ್ಕ ಪಾಮೋಲಿನ್ ಎಣ್ಣೆ ಮತ್ತು ಸಕ್ಕರೆಯನ್ನು ಇದುವರೆಗೂ ಬಿಡುಗಡೆ ಮಾಡಿಲ್ಲ. ಸ್ವತಃ ನಮ್ಮ ಕುಟುಂಬದವರೇ ನಿನ್ನೆಯ ದಿವಸ ಅಂಗಡಿಗೆ ಹೋಗಿ ಎರಡು ಗಂಟೆಗಳ ಕಾಲ ನಿಂತು ವಾಪಸ್ ಬಂದಿದ್ದಾರೆ. ಸಕ್ಕರೆ ಬಂದಿಲ್ಲ, ಎಣ್ಣೆ ಬಂದಿಲ್ಲ. ಆದ್ದರಿಂದ ಕೊಡುವುದಕ್ಕಾಗುವುದಿಲ್ಲವೆಂದು ಅಂಗಡಿಯವರು ಹೇಳಿದ್ದಾರೆ. ಇದರ ಬಗ್ಗೆ ದಯಮಾಡಿ, ಕ್ರಮ ತೆಗೆದುಕೊಳ್ಳುವ ಭರವಸೆಯನ್ನು ಕೊಡಬೇಕು. ನಿನ್ನೆಯ ದಿನ ಆಹಾರ ಮಂತ್ರಿಗಳು 3 ಕೆ.ಜಿ. ಗೋಧಿ ಹೆಚ್ಚು ಕೊಡುತ್ತೇವೆಂದು ಹೇಳಿದರು. ಫುಡ್ ಕಾರ್ಪೋರೇಷನ್ ಗೋಡೌನ್ ನಲ್ಲಿ ಮುಗ್ಗಲು ಗೋಧಿ ಇದೆ. ಈ ಗೋಧಿ ಯಾರಿಗೆ ಬೇಕಾಗಿದೆ. ಜನರಿಗೆ ಬೇಕಾಗಿರುವುದು ಸಕ್ಕರೆ ಮತ್ತು ಪಾಮೋಲಿನ್ ಎಣ್ಣೆ. ಯುಗಾದಿ ಹಬ್ಬಕ್ಕೋಸ್ಕರ ಶುಭಾಶಯಗಳನ್ನು ಕೋರುವವರು ಕೊನೆಯ ಪಕ್ಷ, ಯುಗಾದಿ ಹಬ್ಬಕ್ಕೆ ಸಕ್ಕರೆ, ಪಾಮೋಲಿನ್ ಎಣ್ಣೆಯನ್ನು ಕೊಡಬೇಡವೇ? ಪ್ರತಿ ವರ್ಷ ಮಾರ್ಚ್ ತಿಂಗಳಿನಲ್ಲಿ ಕೊಡಬೇಕಾಗಿರುವ ಗೋಧಿ ಮತ್ತು ಎಣ್ಣೆಯನ್ನು ಬೆಂಗಳೂರು ನಗರದವರಿಗೆ, ಹುಬ್ಬಳ್ಳಿ, ಬೆಳಗಾಂನಂಥ ಪಟ್ಟಣ ಪ್ರದೇಶದಲ್ಲಿರತಕ್ಕ ಜನರಿಗೆ ತಕ್ಷಣ ಬಿಡುಗಡೆ ಮಾಡುವುದಕ್ಕೆ ತಾವು ಆದೇಶ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಇದು ಕೇವಲ ಬೆಂಗಳೂರು ಒಂದಕ್ಕೇ ಅಲ್ಲ, ಇದು ಇಡೀ ರಾಜ್ಯದ ಸಮಸ್ಯೆಯಾಗಿದೆ. ಪ್ರತಿ ವರ್ಷ ಯುಗಾದಿಗೆ ಮುಂಚಿತವಾಗಿ ವಿಶೇಷವಾಗಿ ಸಕ್ಕರೆ ಕೊಡುತ್ತಿದ್ದರು. ನಿನ್ನೆ ಆಹಾರ ಮಂತ್ರಿಗಳು ಒಂದು ಹೇಳಿಕೆ ಕೊಟ್ಟು ಬರೀ ಗೋಧಿ ಮಾತ್ರ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಗೋಧಿನೂ ತಲುಪಿಲ್ಲ, ಸಕ್ಕರೇನೂ ತಲುಪಿಲ್ಲ. ಪರಿಸ್ಥಿತಿ ನಿಜವಾಗಲೂ ಬಹಳ ಕಹಿಯಾಗಿದೆ. ಬೇವು ಬೆಲ್ಲ ತಿನ್ನಬೇಕೆಂಬ ಸಂಪ್ರದಾಯ ಇದೆ. ಬರೀ ಬೇವನ್ನು ಕೊಡಬೇಡಿ, ಸಕ್ಕರೆ ಕೊಡತಕ್ಕಂಥ ಸಂಪ್ರದಾಯವನ್ನು ಮಾಡಿರಿ, ತಕ್ಷಣ